ಹಾನ್ವಲ್‌ಗೆ ಸರ್ವೆ ನಂಬರು 99 ರಲ್ಲಿ ಕಾಜಿಸೊನ್ನೇನಹಳ್ಳಿ ಗ್ರಾಮದಲ್ಲಿ ಜಮೀನು ಕೊಟ್ಟಿರುವುದನ್ನು ತಡೆಹಿಡಿದಿರುವುದಕ್ಕೆ ಕಾರಣವೇನು ?

Sri H V. KOUJALGI.—Let the hon. Member put a separate question Sir, as that does not arise out of this question.

ಶ್ರೀ ಬೋಳ ರಘುರಾಮಶೆಟ್ಟಿ.—ಮುಜರಾಯಿ ಜಮೀನು ಧಾರ್ಮಿಕ ಸಂಸ್ಥೆಗಳಿಗೆ ಸೇರಿರುವಾಗ ಅದನ್ನು ಖಾಸಗಿ ವ್ಯಕ್ತಿಗಳಿಗೆ ಮಾರುವುದಕ್ಕೆ ಕಾರಣವೇನು ?

Sri H. V. KOUJALGI.—Sometimes these muzarai lands near the big towns yeild low income and in such cases if they are sold as non-agricultural lands it would yield more value and with that intention the Government has sold these lands as non-agricultural lands.

Sri C. K. RAJAIAH SHETTY.—Are there any conditions for granting these lands and if so, what are those conditions ?

Sri H. V. KOUJALGI.—The conditions are that they should not be sold to any other person without the previous permission of the Government and they should be used for the purpose for which they are taken.

Foreign Exchange Earnings of the Mysore State

111. Sri SADASIVAPPA PATIL (Deodurg).—

Will the Minister for Industries, Information and Publicity be pleased to state :—

(*a*) the amount of foreign exchange earned during the year 1967-68 and 1968-69 by exporting goods from Mysore State ;

(*b*) the number of Trade agents working on behalf of Mysore State in regard to the export of goods to foreign countries ;

(*c*) the total expenditure incurred for Trade Agents and their staff ?

Sri M. RAJASEKHARA MURTHY (Minister for Industries, Information and Publicity).—

(*a*) 1967-68 — Rs. 3,723.67 lakhs

1968-69 — Rs. 4,300.30 lakhs

(*b*) One.

(*c*) 1967-68

Rs. 1,54,854

1968-69

Rs. 1,61,677-05.

ಶ್ರೀ ಸದಾಶಿವಪ್ಪ ಪಾಟೀರ್.—1967-68 ಮತ್ತು 1998-69ರಲ್ಲಿ ಈ ಎರಡರದೂ ಒಟ್ಟು ಇನ್‌ಕಮ್ ನೋಡಿದರೆ ಸುಮಾರು 7 ಲಕ್ಷ ರೂಪಾಯಿಗೆ ಮೇಲ್ಪಟ್ಟು ಇದೆ, ಖರ್ಚು ಮಾತ್ರ 3 ಲಕ್ಷಕ್ಕೆ, ಮೇಲ್ಪಟ್ಟು ಆಗಿದೆ. ನನಗೆ ತಿಳಿದಮಟ್ಟಿಗೆ. ಈ ವಾಣಿಜ್ಯ ಪ್ರತಿನಿಧಿಗಳು ಯಾರು ? ಅವರ ಕೇಡರ್ ಯಾವುದು ತಿಳಿಸಬೇಕು ?

†ಶ್ರೀ ಎಂ. ರಾಜಶೇಖರ ಮೂರ್ತಿ.—ಟ್ರೇಡ್ ಏಜೆಂಟು ಒಬ್ಬರು ಇದ್ದಾರೆ, ಅವರು ಐ.ಎ.ಎಸ್. ಆಫೀಸರು.

ಶ್ರೀ ಸದಾಶಿವಪ್ಪ ಪಾಟೀರ್.—ಬರೀ ಅವರ ಕೇಡರ್ ಹೇಳಿದರು, ಆ ವಾಣಿಜ್ಯ ಪ್ರತಿನಿಧಿ ಯಾರು ? ಅವರು ಮೈಸೂರಿನವರೇ ಅಥವಾ ಬೇರೆ ಪ್ರಾಂತದವರೇ !

Sri M. RAJASEKHARA MURTHY.—He is an officer of the Government of Mysore.

ಶ್ರೀ ಎಸ್. ಎಂ. ಗುರೆಡ್ಡಿ.—ನಮ್ಮ ರಾಜ್ಯದಿಂದ ಹೊರಗಡೆಗೆ ಕಳುಹಿಸಿದಂತಹ ಸಾಮಾನು ಗಳು ಯಾವುವು ಮತ್ತು ಯಾವುದಕ್ಕೆ ಫಾರಿನ್‌ನಲ್ಲಿ ಹೆಚ್ಚು ಬೇಡಿಕೆ ಇದೆ ಎಂಬ ಮಾಹಿತಿ ಇದೆಯೇ !

ಶ್ರೀ ಎಂ. ರಾಜಶೇಖರ ಮೂರ್ತಿ—35 ಐಟಿಂಗಳು ಇವೆ, ಯಾವ ಯಾವ ವರ್ಷ ಎಷ್ಟೆಷ್ಟು ಅಂತ ಓದು ಎಂದರೆ ಓದಿ ಹೇಳುತ್ತೇನೆ.

Mr. DEPUTY SPEAKER.—A copy of it may by placed on the Table of the House.

ಶ್ರೀ ಸದಾಶಿವಪ್ಪ ಪಾಟೀರ್.—ನಮ್ಮ ದೇಶದ ಎಷ್ಟೋ ಸಾಮಾನುಗಳನ್ನು ನಾವು ಪರದೇಶ ಗಳಿಗೆ ಸಾರಿಗೆ ಮಾಡುತ್ತಿದ್ದೇವೆ. ಆದರೆ ಬೇರೆ ರಾಜ್ಯಗಳ ಟ್ರೇಡ್ ಏಜೆಂಟರುಗಳು ಯಾರೂ ಇರಲಾರದೆ ನಮ್ಮ ರಾಜ್ಯದಿಂದ ಮಾತ್ರ ಈ ಟ್ರೇಡ್ ಏಜೆಂಟರನ್ನು ನೇಮಕ ಮಾಡಲಿಕ್ಕೆ ಕಾರಣ ವೇನು ? ಮತ್ತು ಅವರು ಮೈಸೂರಿನವರೇ ! ಅವರ ಹೆಸರೇನು ! ಅಥವಾ ಅವರು ಬೇರೆ ರಾಜ್ಯ ದವರೇ !

ಶ್ರೀ ಎಂ. ರಾಜಶೇಖರ ಮೂರ್ತಿ.—ನಾವು ನೇಮಕ ಮಾಡಿರತಕ್ಕ ಟ್ರೇಡ್ ಏಜೆಂಟ್ ಮೈಸೂರು ಸರ್ಕಾರದ ಆಫೀಸರು. ಅವರು ಐ.ಎ.ಎಸ್. ಆಫೀಸರು ಅವರ ಹೆಸರು ಬಿ. ಎಸ್. ಮುದ್ದಪ್ಪ ಅಂತ. ಇಂಡಿಯಾ ಸರ್ಕಾರದವರು ಇದಕ್ಕೆ ಪರ್ಮಿಷನ್ ಕೊಟ್ಟಿದ್ದಾರೆ. ಬೇರೆ ರಾಜ್ಯ ದವರು ಯಾರು ನೇಮಕ ಮಾಡದೆ ನಮ್ಮ ರಾಜ್ಯದವರನ್ನು ಮಾತ್ರ ನೇಮಕ ಮಾಡಲು ಕಾರಣ ವೇನೆಂದರೆ ನಮ್ಮ ಹತ್ತಿರ ಬೇಕಾದಷ್ಟು ಸ್ಯಾಂಡರ್ ಸೋಪು ಮತ್ತು ಸ್ಯಾಂಡರ್ ಆಯಿಲ್ ಇದೆ. ಅದನ್ನು ಚೆನ್ನಾಗಿ ಮಾರ್ಕೆಟ್ ಮಾಡಲು ಎಂಬ ಉದ್ದೇಶದಿಂದ ಮಾಡಿದ್ದೇನೆ. ಮತ್ತು ಮೈಸೂರು ರಾಜ್ಯದವರು—ಖಾಸಗಿಯವರೂ ಸಹ ಅವರಿಗೆ ಬೇಕಾದ ಪೆಪಿನರಿಯನ್ನು ಪರ್ಚೇಸ್ ಮಾಡ ಬೇಕೆಂದಾಗ ಅವರ ಸಹಾಯವನ್ನು ಸಡೆಯುತ್ತಾರೆ.

ಶ್ರೀ ಎಂ. ನಾಗಪ್ಪ.—ಸುಮಾರು ಒಂದೂವರೆ ಲಕ್ಷ ರೂಪಾಯಿ ಖರ್ಚು ಮಾಡುತ್ತಾ ಇದ್ದೇವೆ. ಇದರಲ್ಲಿ ಏನಾದರೂ ಪ್ರಾಫಿಟ್ ಇದೆಯೇ ? ಅದೂ ಅಲ್ಲದೆ ಇತ್ತೀಚೆಗೆ ಪಾರ್ಲಿಮೆಂಟ್‌ನಲ್ಲಿ ಈ ವಿಷಯ ಚರ್ಚೆಗೆ ಬಂದು ಅಲ್ಲಿ ನಮ್ಮ ಏಜೆಂಟು ಇರತಕ್ಕದ್ದು ನರಿಯಾದ್ದಲ್ಲ ಕೇಂದ್ರ ಸರ್ಕಾರ ಅವರನ್ನು ವಾಪಸ್ ಕರೆಸಿಕೊಳ್ಳಲಿಕ್ಕೆ ಯೋಚನೆ ಮಾಡುತ್ತದೆ ಎಂಬುದಾಗಿ ತಿಳಿಸಲಾಗಿತ್ತು. ರಾಜ್ಯ ಸರ್ಕಾರದ ಗಮನಕ್ಕೆ ಈ ವಿಷಯ ಬಂದಿದೆಯೇ, ಇದರ ಬಗ್ಗೆ ನಿಮ್ಮ ನಿರ್ಧಾರವೇನು ?

ಶ್ರೀ ಎಂ. ರಾಜಶೇಖರಮೂರ್ತಿ.—ಬಹಳ ದೊಡ್ಡ ಪ್ರಶ್ನೆ ಹಾಕಿದ್ದಾರೆ. ಅನೇಕ ಸಾಮಾನು ಗಳನ್ನು ಎಕ್ಸ್‌ಪೋರ್ಟ್ ಮಾಡುತ್ತಾ ಇದ್ದೇವೆ. ಮೈಸೂರು ಸರ್ಕಾರವು ಒಂದೇ ಅಲ್ಲ, ಅನೇಕ ಖಾಸಗಿ ಸಂಸ್ಥೆಗಳವರೂ ಸಹ ಮೈಸೂರು ರಾಜ್ಯದಿಂದ ಬೇರೆ ದೇಶಗಳಿಗೆ ರಫ್ತು ಮಾಡುತ್ತಾ ಇದ್ದಾರೆ. ಆದ್ದರಿಂದ ಪ್ರಾಫಿಟ್ ಇಷ್ಟೇ ಅಂತ ಹೇಳಲಿಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ಈ ಟ್ರೇಡ್ ಏಜೆಂಟ್ ಬಗ್ಗೆ ಚರ್ಚೆ ನಡೆದಿದೆ ಎಂದು ಹೇಳಿದ್ದಾರೆ, ನನ್ನ ಹತ್ತಿರ ಪಾರ್ಲಮೆಂಟ್ ಪ್ರೊಸೀಡಿಂಗ್ಸ್ ಇದೆ. ಗವರ್ನಮೆಂಟ್ ಆಫ್ ಇಂಡಿಯಾದವರು ನಮ್ಮ ಈ ಟ್ರೇಡ್ ಏಜೆಂಟನ್ನು ನೇಮಕ ಮಾಡು ವುದಕ್ಕೆ ಪರ್ಮಿಷನ್ ಕೊಟ್ಟಿದ್ದಾರೆ, ಆ ಪ್ರಕಾರ ನೇಮಕ ಮಾಡಿದ್ದೇವೆ.

†Indicates that the remarks or speeches have not been revised by the member concerned.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ಇಲ್ಲಿ ಕೊಟ್ಟಿರತಕ್ಕ ಉತ್ತರದಲ್ಲಿ; ವಿದೇಶವಿನಿಮಯ ಎಷ್ಟು ಸಿಕ್ಕಿದೆ ಎಂಬುದನ್ನು ತಿಳಿಸುತ್ತಾ (1) 3723.67 ಲಕ್ಷ ರೂಪಾಯಿಗಳೆಂದೂ ಮತ್ತು 4.00.30 ರೂಪಾಯಿಗಳೆಂದೂ ಇಲ್ಲಿ ತಿಳಿಸಿದೆ. ಇದರಲ್ಲಿ ಸರ್ಕಾರಿ ಉದ್ಯಮಗಳಿಂದ ಎಷ್ಟು ಮತ್ತು ಖಾಸಗೀ ಉದ್ಯಮಗಳಿಂದ ಎಷ್ಟು ವಿನಿಮಯ ಗಳಿಸಿದೆ ಎಂಬುದನ್ನು ತಿಳಿಸುವುದಕ್ಕಾಗುತ್ತದೆಯೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಸರ್ಕಾರದವರು ಹೊರಗಡೆಗೆ ರವಾನೆ ಮಾಡತಕ್ಕ ಸರಕಿನಲ್ಲಿ ಮುಖ್ಯವಾದವು ಎಂದರೆ ಗಂಧದ ಎಣ್ಣೆ ಮತ್ತು, ಗಂಧದ ಸಾಮಾನು ಈ ಎರಡೇ ಹೆಚ್ಚು. 1968-69ರಲ್ಲಿ ರಫ್ತು ಮಾಡಿರತಕ್ಕ ಗಂಧದ ಎಣ್ಣೆಯ ಮೌಲ್ಯ ರೂ. 172 45 ಲಕ್ಷ ಮತ್ತು ರಫ್ತು ಮಾಡಿದ ಗಂಧದ ಸಾಬೂನು ಎಷ್ಟೆಂದರೆ ರೂ. 6.46 ಕೋಟಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಒಟ್ಟಿನಲ್ಲಿ ಈ ಉದ್ಯಮದಿಂದ ಲಾಭ ಬಂದಿದೆಯೇ ಅಥವಾ ಹಾನಿಯಾಗಿದೆಯೇ ಎಂಬುದನ್ನಾದರೂ ತಿಳಿಸುವುದಕ್ಕೆ ಸಾಧ್ಯವೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡ ಹಾಗೆ ಕಾಣುತ್ತಿಲ್ಲ. ಇಲ್ಲಿಂದ ಸರ್ಕಾರದವರು ಒಬ್ಬರೇ ಅಲ್ಲ, ಅನೇಕ ಸಂಸ್ಥೆಗಳವರು ಮತ್ತು ಕಂಪೆನಿಗಳವರು ಹಾಗೂ ಫರ್ಮುಗಳವರು ಸರಕುಗಳನ್ನು ರಫ್ತು ಮಾಡುತ್ತಾರೆ. ಆದ್ದರಿಂದ ಅದನ್ನು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಪಾಟಾಳ್ ನಾಗರಾಜ್.—ನಮ್ಮಲ್ಲಿ ಆ ಶ್ರೀಮಾನ್ ಮುದ್ದಪ್ಪನವರಿಂದ ಹೆಚ್ಚಿನ ದಕ್ಷರು ಯಾರೂ ಇರಲಿಲ್ಲವೇ ? ಅವರನ್ನು ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರ ಅಳಿಯ ಎಂಬ ಉದ್ದೇಶದಿಂದ ಅಲ್ಲಗೆ ನೇಮಕ ಮಾಡಲಾಯಿತೇ ?

Sri M. RAJASEKHARA MURTHY.—The appointment has nothing to do with the relationship of the Congress President. This officer is a brilliant Officer, he has an article written at his credit.

Sri N. A. CHANNE GOWDA.—What was the special qualifications he has got in this respect to be appointed ? Why should he be there for private individuals who have got business interest ?

Sri M. RAJASEKHARA MURTHY.—He is the best qualified man. His qualifications have been taken into consideration. He will also assist private industrialists whenever they want his assistance..

Sri V. N. PATIL.—Why a relation of the Congress President alone should have been appointed as a Trade Agent which has given room for discussion in the Lok Sabha ? Are there no efficient officers available in the Mysore State to be appointed as Trade Agents ? What special interest is there in appointing this man alone ?

Sri M. RAJASEKHARA MURTHY.—I have already pointed out that this has nothing to do with the relationship of the Congress President. He was the best man and that is why he was selected.

Sri D. B. KALMANKAR.—May I know whether it is only the Mysore State that has got its Trade Agent or any other States also have got their Trade Agents at London ?

Sri M. RAJASEKHARA MURTHY.—So far as my knowledge goes, it is only the Mysore State that has got its Agent. This appointment is made since a long time.

ಶ್ರೀ ಎನ್. ಜಿ. ಹಾಲಪ್ಪ.—ನಮ್ಮ ಟ್ರೇಡ್ ಏಜಂಟರು ಇಲ್ಲಿರತಕ್ಕ ಖಾಸಗೀ ಕಂಪೆನಿಗಳವರ ಕೆಲಸವನ್ನು ನೋಡಿಕೊಳ್ಳುತ್ತಾರೆಂದು ಹೇಳಿದ್ದಾರೆ. ಅಂದಾಗ ಆ ಖಾಸಗೀ ಸಂಸ್ಥೆಗಳವರಿಂದ ನೇನಾದರೂ ಈ ಬಗ್ಗೆ ಖರ್ಚಿಗೆ ಹಣವನ್ನು ವಸೂಲಾಮಾಡಲಾಗುತ್ತಿದೆಯೇ ?

Sri M. RAJASEKHARA MURTHY.—This is more or less like promotional activity.

ಶ್ರೀ ಎಂ. ಎಸ್. ಕೃಷ್ಣನ್.—ಅಲ್ಲಿರತಕ್ಕ ನಮ್ಮ ಟ್ರೇಡ್ ಏಸಂಟರು ಇಲ್ಲಿನ ಖಾಸಗೀ ಸಂಸ್ಥೆಗಳವರ ಕೆಲಸವನ್ನು ನೋಡಿಕೊಂಡು ಇವರಿಗೂ ಸಹಾಯ ಮಾಡುತ್ತಾರೆಂದು ಹೇಳಲಾಯಿತು. ಆದರೆ ನಮ್ಮ ಸರ್ಕಾರದ ಕೆಲಸ ಬಹಳ ಕಡಮೆ. ಹೊರಗಡೆಯವರ ಕೆಲಸಗಳೇ ಹೆಚ್ಚಾಗಿರುವುದರಿಂದ ಅಲ್ಲಿ ಅಷ್ಟು ದೊಡ್ಡ ಸಿಬ್ಬಂದಿಯನ್ನು ಇಟ್ಟುಕೊಂಡಿರುವುದು ನಮ್ಮ ಸರ್ಕಾರಕ್ಕೆ ದೊಡ್ಡ ನಷ್ಟವಲ್ಲದೇ ?

ಶ್ರೀ ಎಂ. ರಾಜಶೇಖರ ಮೂರ್ತಿ.—ನಾವು ಗಂಧದ ಎಣ್ಣೆಯನ್ನು ಸುಮಾರು ವರ್ಷಕ್ಕೆ ಒಂದು ಕೋಟಿ ಖರ್ಚು ರಫ್ತು ಮಾಡುತ್ತಿದ್ದೇವೆ, ಮತ್ತು ಗಂಧದ ಸಾಬೂನನ್ನು ವರ್ಷಕ್ಕೆ ಮೂರು ನಾಲ್ಕು ಕೋಟಿಗಳವರೆಗೂ ರಫ್ತು ಮಾಡುತ್ತಿದ್ದೇವೆ. ಆದ್ದರಿಂದ ಅಲ್ಲಿ ಆ ಸಿಬ್ಬಂದಿಯ ವೆಚ್ಚಕ್ಕೆ ತಗಲುವ ವೆಚ್ಚ ಅಷ್ಟೇನೂ ಹೆಚ್ಚಲ್ಲ.

Sri J. P. SARWESH.—Will the Government consider abolishing this post, which is the object of much criticism both in Lok Sabha as well as in this State ?

Sri M. RAJASEKHARA MURTHY.—Sir, Government are not considering the abolition of this post.

Schools having their own buildings in Kalghatgi Taluk

131 Sri F. S. PATIL (Kalghatgi).—

Will the Minister for Education be pleased to state :—

(*a*) the number of Kannada Primary School Teachers in Kalghatgi taluk ;

(*b*) the number of boys ;

(*c*) the number of girls ;

(*d*) the number of schools having their own buildings ;

(*e*) the number ef schools which are not having their own buildings ;

(f) the number of incomplete school buildings in the above taluk ?

Sri N. M. KOTRABASIAH SOGI (Deputy Minister for Education).—

(*a*) 218.

(*b*) 6017.

(*c*) 4282.

(*d*) 28.

(*e*) 58.

(*f*) 47.

ಶ್ರೀ ಎಫ್. ಎಸ್. ಪಾಟೀಲ್.—(ಈ)ಗೆ ಉತ್ತರವಾಗಿ 47 ಸ್ಕೂಲು ಕಟ್ಟಡಗಳು ಇನ್ನೂ ಕಂಪ್ಲೀಟ್ ಆಗಿಲ್ಲವೆಂದು ಹೇಳಿದ್ದೀರಿ. ಅವು ಯಾವಾಗ ಕಂಪ್ಲೀಟ್ ಆಗುತ್ತದೆ ?